**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.5991/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದ**

ನಾನು 9 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಸ್ವಲ್ಪ ಬರುತ್ತದೆ. ನನ್ನ ಮನೆಯಲ್ಲಿ ನಮ್ಮ ಅಪ್ಪ, ಅಮ್ಮ, ತಂಗಿ, ಇಬ್ಬರು ಅಕ್ಕಂದಿರು ಮತ್ತು ನಾನು ಇದ್ದೇವು. ಮನೆಯ ಸಂಪೂರ್ಣ ಜವಾಬ್ದಾರಿಯನ್ನು ನಾನೇ ತೆಗೆದುಕೊಂಡಿರುತ್ತೇನೆ. ನಾನು ವೈಭವ್ ಜ್ಯೂಸ್ ಸ್ಟಾಲ್ ನಲ್ಲಿ ಕೆಲಸ ಮಾಡುತ್ತಿದ್ದೇನು. ಅದರ ಮಾಲೀಕರು ಬೇರೆಯವರಿದ್ದಾರೆ. ನನಗೆ ತಿಂಗಳಿಗೆ ರೂ.15 ರಿಂದ 16 ಸಾವಿರ ಸಂಬಳವಿದೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಜ್ಯೂಸ್ ಸ್ಟಾಲ್ ನಲ್ಲಿ ಕೆಲಸ ಮಾಡುವುದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಆದಾಯದ ಮೂಲ ಇಲ್ಲ.

ನನಗೆ ಆರೋಪಿ ಸುಮಾರು 8 ವರ್ಷಗಳಿಂದ ಪರಿಚಯ. ಸದರಿ ಅಂಶವನ್ನು ಪಿರ್ಯಾದಿಯಲ್ಲಿ ತಿಳಿಸಿಲ್ಲ. ಆರೋಪಿ ಮಟನ್ ಶಾಪ್ ಇಟ್ಟುಕೊಂಡಿದ್ದಾನೆ. ನಾನು ಮಟನ್ ತರಲು ಹೋದಾಗ ಆತ ಪರಿಚಯವಾಗಿದ್ದಾನೆ. ಇದನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಿಕ ಪರಿಚಯ ಇಲ್ಲ ಎಂದರೆ ಸರಿಯಲ್ಲ.

ನಾನು ಕಳುಹಿಸಿದ ನೋಟೀಸ್ ನಿಪಿ 5 ಆರೋಪಿಗೆ ಜಾರಿಯಾಗಿರುವ ಕುರಿತು ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಆರೋಪಿಗೆ ನೋಟೀಸ್ ಕಳುಹಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ದಿನ ಎಕ್ಕೆಗೊಂದಿ ಗ್ರಾಮದಿಂದ ಬರುತ್ತೇನೆ ಎಂದರೆ ಸರಿ. ನಿಪಿ 5 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 5 ರಲ್ಲಿ ನನ್ನ ಮತ್ತು ವಕೀಲರ ಸಹಿ ಇಲ್ಲ ಎಂದರೆ ಸರಿ. ಅಂಚೆ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ 5 ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ 5 ಆರೋಪಿಗೆ ಜಾರಿಯಾಗಿದ್ದರೆ ಆತ ಅದಕ್ಕೆ ಪ್ರತ್ಯುತ್ತರ ನೀಡುತ್ತಿದ್ದ ಎಂದರೆ ಸರಿ. ನಿಪಿ 5 ಆರೋಪಿಗೆ ಜಾರಿಯಾಗದೇ ಇರುವ ಕಾರಣ ಆತ ಅದಕ್ಕೆ ಪ್ರತ್ಯುತ್ತರ ನೀಡಲು ಸಾಧ್ಯವಾಗಲಿಲ್ಲ ಎಂದರೆ ಸರಿ. ಆರೋಪಿ ಯಾವ ದಿನದಂದು ಎಷ್ಟು ಹಣ ಕೇಳಿದ ಎಂದು ನಿಪಿ 5 ರಲ್ಲಿ ಮತ್ತು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಯಾವ ದಿನಾಂಕದಂದು ಆರೋಪಿಗೆ ಹಣ ನೀಡಿದೆ ಎಂದು ಪಿರ್ಯಾದಿಯಲ್ಲಿ ಮತ್ತು ನಿಪಿ 5 ರಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ರೂ4 ಲಕ್ಷದ 80 ಸಾವಿರ ದೊಡ್ಡ ಮೊತ್ತ ಆಗುತ್ತದೆ ಎಂದರೆ ಸರಿ. ನಾನು ಆರೋಪಿಗೆ ಆ ಹಣವನ್ನು ನಗದು ರೂಪದಲ್ಲಿ ನೀಡಿದ್ದೇನೆ. 20 ಸಾವಿರ ಕ್ಕಿಂತ ಹೆಚ್ಚು ಹಣದ ವ್ಯವಹಾರ ಮಾಡಬೇಕಾದರೆ ಖಾತೆ ಮೂಲಕ ವರ್ಗಾವಣೆ ಮಾಡಬೇಕು ಎಂದರೆ ಸರಿ. 4 ಲಕ್ಷದ 80 ಸಾವಿರ ಹಣ ಇತ್ತು ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇತ್ತು ಆ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ಒಡವೆಗಳನ್ನು ಅಡವಿಟ್ಟು ಆರೋಪಿಗೆ ಹಣವನ್ನು ನೀಡಿರುತ್ತೇನೆ. 2 ಲಕ್ಷ ನಗದು ರೂಪದಲ್ಲಿ ನಿನೀಡಿದ್ದು, ಉಳಿಕೇ ಹಣ ಒಡವೆಗಳನ್ನು ಅಡವಿಟ್ಟು ನೀಡಿದ್ದೇನೆ. ಒಡವೆಗಳನ್ನು ಅಡವಿಟ್ಟಿದ್ದಕ್ಕೆ ನನ್ನ ಬಳಿ ದಾಖಲೆಗಳು ಇವೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಸದರಿ ಅಂಶವನ್ನು ಪಿರ್ಯಾದಿನಲ್ಲಿ ಮತ್ತು ನಿಪಿ 5 ರಲ್ಲಿ ಹೇಳಿ ಬರೆಸಿಲ್ಲ. ಯಾವ ದಿನಾಂಕದಂದು ಹಣ ಮರುಪಾವತಿ ಮಾಡು ಎಂದು ನನ್ನ ಪಿರ್ಯಾದಿಯಲ್ಲಿ ಮತ್ತು ನಿಪಿ5 ರಲ್ಲಿ ಬರೆಸಿಲ್ಲ.

ಆರೋಪಿ ನನಗೆ ಯೂನಿಯನ್ ಬ್ಯಾಂಕ್ ನ ಚೆಕ್ ನ್ನು ನೀಡಿದ್ದಾರೆ . ಚೆಕ್ ಸಂಖ್ಯೆ ನನಗೆ ಹೇಳಲು

ಬರುವುದಿಲ್ಲ. ಯಾವ ದಿನಾಂಕ ನಮೂದಿಸಿ ಚೆಕ್ ನೀಡಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಖಾತೆಯಲ್ಲಿ ಹಣ ಇಲ್ಲ ಎಂದು ನಿಪಿ1 ಅಮಾನ್ಯಗೊಂಡಿದೆ.

ಸಿಸಿ 6012/2024 ರಂತೆ ಆರೋಪಿತನ ವಿರುದ್ಧ ಇನ್ನೊಂದು ಚೆಕ್ ಪ್ರಕರಣವನ್ನು 4 ಲಕ್ಷದ 80 ಸಾವಿರ ರೂಗಳಿಗೆ ಹೂಡಿದ್ದೇನೆ ಎಂದರೆ ಸರಿ. ಖಾತೆಯಲ್ಲಿ ಹಣ ಇಲ್ಲದೆ ಇರುವ ಕಾರಣ ಚೆಕ್ ಅಮಾನ್ಯಗೊಂಡಿದೆ ಎಂದು ನನಗೆ ಗೊತ್ತಿಲ್ಲ. ನಿಪಿ 1 ಚೆಕ್ ನ್ನು ನಾನು ಒಂದೇ ಬಾರಿ ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದೇನೆ. ಪಿರ್ಯಾದಿಯ ಖಂಡಿಕೆ 5 ರಲ್ಲಿ **Refer to drawer** ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ನನ್ನ ಪಿರ್ಯಾದಿಯಲ್ಲಿ 2 ನೇ ಬಾರಿ ಚೆಕ್ ಅಮಾನ್ಯಗೊಂಡಿರುವ ದಿನಾಂಕ 14.06.2024 ಎಂದು ನಮೂದಾಗಿದೆ ಎಂದರೆ ಸರಿ.

ನಿಪಿ1 ರಲ್ಲಿ ಬೇರೆ ಬೇರೆ ಶಾಹಿಗಳಿಂದ ಬರೆಯಲಾಗಿದೆ ಎಂದರೆ ಸರಿ. ನಿಪಿ 1 ರ ಒಕ್ಕಣೆಗಳನ್ನು ಎಸ್ ಬಿ ಐ ಬ್ಯಾಂಕ್ ನವರು ಬರೆದಿದ್ದಾರೆ . ಅವರ ಹೆಸರು ನನಗೆ ಗೊತ್ತಿಲ್ಲ. ಹಣವನ್ನು ಸಹ ನಾನೇ ಬರೆಸಿದ್ದೇನೆ. ನಿಪಿ 2 ಮತ್ತು ನಿಪಿ1 ರಲ್ಲಿರುವ ಬರವಣಿಗೆ ಒಂದೇ ರೀತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ರ ಒಕ್ಕಣೆಗಳನ್ನು ಬ್ಯಾಂಕ್ ನವರೇ ಬರೆದಿದ್ದಾರೆ. ಯಾವ ಕಾರಣಕ್ಕಾಗಿ ಚೆಕ್ ಅಮಾನ್ಯಗೊಂಡಿದೆ ಎಂದು ನಿಪಿ 3 ರಲ್ಲಿ ಸ್ಪಷ್ಟವಾಗಿ ಬರೆದಲ್ಲ ಎಂದು ಸರಿ. ಯಾವ ಕಾರಣಕ್ಕಾಗಿ ಚಕ್ ಅಮಾನ್ಯಜಗೊಂಡಿದೆ ಎಂದು ನಾನ್ನು ಬ್ಯಾಂಕ್ ನವರಿಗೆ ಕೇಳೀಲ್ಲ.

ನನ್ನ ಮತ್ತು ಆರೋಪಿ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.